Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

Rtn. Francesco Arezzo
R.I. President

Rtn. K. Palaksha
District Governor

ಐಶ್ವರ್ಯ

ಸಂಪುಟ: 4 ವಾ ಸಾಪ್ತಾಹಿಕ ಸಂಚಿಕೆ : 30
ದಿನಾಂಕ: 27.01.2026

Rtn. Anil Kumar
President

Rtn. Krishnappa
Secretary

ರೋಟರಿ ಜಿಲ್ಲಾ ಸಮ್ಮೇಳನದಲ್ಲಿ ಭಾಗಿಯಾದ ಐಸಿರಿ

ಸ್ಪಂದನ 2026 – ರೋಟರಿ ಜಿಲ್ಲೆ 3182ರ ಹತ್ತನೇ ಜಿಲ್ಲಾ ಸಮ್ಮೇಳನವು ಜನವರಿ 23, 24 ಮತ್ತು 25ರಂದು ಹಾಸನದ ಯುನೈಟೆಡ್ ಸಿ.ಎಂ.ಸಿ. ಕ್ಯಾಂಪಸ್ ನಲ್ಲಿ ಅದ್ದೂರಿಯಾಗಿ ನಡೆಯಿತು. ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳ ಸಾಧಕರ ಪ್ರೇರಣಾದಾಯಕ ಭಾಷಣಗಳು, ಸಾಂಸ್ಕೃತಿಕ ಮನೋರಂಜನಾ ಕಾಯಕ್ರಮಗಳು, ವ್ಯಾಪಾರೀ ಮಳಿಗೆಗಳು, ವೈವಿಧ್ಯಮಯ ಊಟೋಪಚಾರ, ಫೆಲೋಶಿಪ್ ಎಲ್ಲವೂ ಇತ್ತು.

ಮೊದಲ ದಿನ ಸಾಯಂಕಾಲದ ಹೊತ್ತಿಗೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ನಟಿ ನಮ್ರತಾ ಗೌಡ ಭಾಗವಹಿಸಿದ್ದರೆ, ಮರುದಿನ ಬೆಳಿಗ್ಗೆ ಸುಂದರ ಮೆರವಣಿಗೆ, ಧ್ವಜಾರೋಹಣದ ಬಳಿಕ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿಯವರ ಆಶೀರ್ವಚನ, ಪ್ರತಿಷ್ಠಿತ ಬಾಹ್ಯಾಕಾಶ ವಿಜ್ಞಾನಿ, ಇಸ್ರೋ ಮಾಜಿ ಅಧ್ಯಕ್ಷ, ಚಂದ್ರಯಾನ–3 ರೂವಾರಿ, ಚಾಣಕ್ಯ ವಿವಿಯ ಕುಲಪತಿ ಡಾ. ಎಸ್. ಸೋಮನಾಥ್, ಅಂತರಾಷ್ಟ್ರೀಯ ರೋಟರಿ ಪ್ರತಿನಿಧಿ PDG. ತುಷಾರ್ ಷಾ, ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕರಾಗಿ (DGMO), ಸೇನಾ ಸಿಬ್ಬಂದಿ ಉಪ ಮುಖ್ಯಸ್ಥ (Vice Chief of Defence Staff) ಆಗಿ ಸೇವೆಸಲ್ಲಿಸಿದ್ದ ಲೆಫ್ಟಿನೆಂಟ್ ಜನರಲ್ ಬಿ. ಎಸ್. ರಾಜು, ಹದಿನಾರರ ಹರೆಯದ ಪ್ರತಿಭೆ, AI ಕ್ಷೇತ್ರದಲ್ಲಿ ಈಗಾಗಲೇ ಸಾಧನೆಗೈದ ನಿಪುಣ ಉದ್ಯಮಿ ರಾವುಲ್ ಜಾನ್ ಆಜೂ, ಖ್ಯಾತ ಹಾಸ್ಯ ಕಲಾವಿದ, ಲೇಖಕ, ಕನ್ನಡ ವಿದ್ವಾಂಸ, ಶಿಕ್ಷಣ ತಜ್ಞ ಪ್ರೊ. ಕೃಷ್ಣೇಗೌಡರ ಭಾಷಣಗಳು, ಕ್ಯಾಮಿಲಿಯನ್ ತಂಡದ ಮನೋರಂಜನಾ ಕಾರ್ಯಕ್ರವಿದ್ದರೆ, ಮೂರನೇ ದಿನ ಉದ್ಯಮಿ ದಿ. ರತನ್ ಟಾಟಾ ಜತೆ ಕಾರ್ಯನಿರ್ವಹಿಸಿದ, 26/11 ಮುಂಬೈ ಭಯೋತ್ಪಾದಕ ದಾಳಿಯ ನಂತರ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಮುನ್ನಡೆಸಿದ ಶ್ರೀ HN ಶ್ರೀನಿವಾಸ್, ಮಿಮಿಕ್ರಿ ಗೋಪಿಯವರ ಭಾಷಣ ಮತ್ತು ಸಮಾರೋಪ ಸಮಾರಂಭ ನಡೆಯಿತು.

ನಾನು ಮತ್ತು ಪಲ್ಲವಿ ಭಾಗವಹಿಸಿದ ಮೊದಲ ರೋಟರಿ ಜಿಲ್ಲಾ ಸಮ್ಮೇಳನ

ಲೇಖನ ರೊ. ರಾಜೇಶ್ ಡಿ. ಶೆಣೈ ಮತ್ತು ಆನ್ ಪಲ್ಲವಿ

ಡಿಸೆಂಬರ್ ತಿಂಗಳ ವಾರದ ಸಭೆಯೊಂದರಲ್ಲಿ, ರೋಟರಿ ಜಿಲ್ಲಾ ಸಮ್ಮೇಳನಕ್ಕೆ ನೋಂದಾಯಿಸಿದ ಸದಸ್ಯರ ಹೆಸರುಗಳನ್ನು ತಿಳಿಸಿದಾಗ, ನಮ್ಮ ಸದಸ್ಯೆ ರೊ.ಗೀತಾಶ್ರೀ ಎಂ. ಉಪಾಧ್ಯರವರು ಕಾನ್ಫರೆನ್ಸ್ ಪ್ರಮೋಷನ್ ಜವಾಬ್ದಾರಿ ಹೊಂದಿರುವ ಈ ಸಾಲಿನಲ್ಲಿ, ನಾನೂ ಹೆಸರು ನೋಂದಾಯಿಸಿದರೆ ರೋಟರಿ ಐಸಿರಿಯ ನೋಂದಾವಣೆ ಎರಡಂಕೆಗೆ ಏರುತ್ತದೆ ಎನ್ನುವ ಸಂತೋಷಕ್ಕಾಗಿ ನೋಂದಾವಣೆಗೈದೆ.

ಬಳಿಕ, ಅವಕಾಶವಿರುವುದರಿಂದ ಪತ್ನಿ ಪಲ್ಲವಿಯನ್ನೂ ಜೊತೆಗೆ ಕರೆದೊಯ್ಯುವುದಾಗಿ ನಿರ್ಧರಿಸಿದೆ. ಅಂತೆಯೇ, ಜನವರಿ 23ರ ಶುಕ್ರವಾರ ಬೆಳಿಗ್ಗೆ 8.00ಘಂಟೆಗೆ ಪರ್ಕಳದಿಂದ ನಮ್ಮ ಪ್ರಯಾಣ ಆರಂಭವಾಯಿತು. ಕಾರ್ಯದರ್ಶಿ ರೊ.ಕೃಷ್ಣಪ್ಪನವರ ಪಟ್ಟದರಥಕ್ಕೆ ಅವರೇ ಸಂಪೂರ್ಣ ಸಾರಥಿ. ಜೊತೆಗೆ ರೊ.PHF. ಗುರುಪ್ರಸಾದ್ ಕಾಮತ್ ಮತ್ತು ರೊ. PHF. ಸ್ಮಿತಾ ಕಾಮತ್.

ಮಂಗಳೂರು ಮೂಲಕ ಸಾಗಿ ಸುಮಾರು 2.30ರ ವೇಳೆಗೆ ಹಾಸನ ತಲುಪಿದೆವು. ನಡುವೆ ಒಂದು ಲಘು ವಿರಾಮ ಮತ್ತೊಂದು ಅಡ್ಯಾರ್ ಆನಂದ ಭವನದಲ್ಲಿ (A2B) ಊಟದ ಮಾಡಲು ವಿರಮಿಸಿದ್ದು ಬಿಟ್ಟರೆ ನಮ್ಮ ಕಾರು ಸಾಗುತ್ತಲ್ಲೇ ಇತ್ತು. ಪ್ರಯಾಣದುದ್ದಕ್ಕೂ ನಡೆದ ಸಂವಾದಗಳ ನಡುವೆ ಘಟ್ಟ ಏರಿದ್ದೇ ಗೊತ್ತಾಗಲಿಲ್ಲ! ಹಾಗಿತ್ತು ಕೃಷ್ಣ(ಪ್ಪ) ಸಾರಥ್ಯ.

ನಮ್ಮನ್ನು ವಾಸ್ತವ್ಯದ ಹೋಟೆಲಿಗೆ ಬಿಟ್ಟು, ರೊ. ಕೃಷ್ಣಪ್ಪ ರೊ. ಗುರುಪ್ರಸಾದ್ ರೊಂದಿಗೆ ಹೋಗಿ, ಚುನಾವಣೆಯಲ್ಲಿ ಮತ ಚಲಾಯಿಸಲು ಬಂದರು.

ನಂತರ ನಾವೆಲ್ಲರೂ ಸಂಜೆಯ ಹೊತ್ತಿಗೆಕ್ಕೆ ಬಂದೆವು. ವಿಶಾಲ ಹದಿನೇಳು ಎಕರೆ ಕ್ಯಾಂಪಸ್ ನ ಬಯಲಿನಲ್ಲಿ ಹಾಕಿದ ಭವ್ಯ ಜರ್ಮನ್ ಟೆಂಟ್, ಸಮ್ಮೇಳನದ ಸಭಾಂಗಣವಾಗಿ ಮಿನುಗುತ್ತಿತ್ತು. ಎದುರಿಗೆ ನೋಂದಾವಣೆ, ಐಡಿ ಕಾರ್ಡ್ ವಿತರಣಾ ಕೌಂಟರ್, ಚಾಟ್ಸ್ ಮತ್ತು ಹಟ್ಟಿ ಕಾಪಿ(ಫಿ) ಕೌಂಟರ್, ಎಡಭಾಗದಲ್ಲಿ ಟ್ರಾಕ್ಟರ್ ಗಳಿಂದ ಹಿಡಿದು ಒಂದೂವರೆ ಕೋಟಿ ಮೌಲ್ಯದ ಕಾರುಗಳ ತನಕದ ವಾಹನಗಳ ಪ್ರದರ್ಶನ, ಅದರ ಹಿಂದೆ ಕಾನ್ಫೆರೆನ್ಸ್ ಕಿಟ್ ವಿತರಣಾ ಕೌಂಟರ್, ಫೆಲೋಶಿಪ್, ನಾನ್ ವೆಜ್ ಮತ್ತು ವೆಜ್ ಆತಿಥ್ಯಕ್ಕಾಗಿ ಭವ್ಯ ಹಾಲ್ ಗಳು. ಬಲಗಡೆ, ರೋಟರಿ ಘನತೆಗೆ ತಕ್ಕುದಾದ ಮೌಲ್ಯದ ಸುಮಾರು 25ರಷ್ಟು ವ್ಯಾಪಾರ ಮಳಿಗೆಗಳು!

ಆರು ಘಂಟೆಗೆ ಮುಖ್ಯ ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭ ನಡೆದು, ನಟಿ ನಮ್ರತಾ ಗೌಡ ಅತ್ಯಂತ ಚುಟುಕಾದ ಸಂದೇಶದಲ್ಲಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಬಳಿಕ ಕಲಾ ವೈಭವ ನಡೆಯುತ್ತಿರಲು, ನಾವೆಲ್ಲ ಸ್ಟಾಲ್ ನತ್ತ ಹೆಜ್ಜೆ ಹಾಕಿದೆವು.

ನಂತರ ಒಡನಾಡಿಗಳ ಸ್ನೇಹಕೂಟ, ಬಗೆ ಬಗೆಯ ಭಕ್ಷ್ಯಗಳ ಭೋಜನ ಸವಿದು ರಾತ್ರಿ ಹನ್ನೊಂದರ ವೇಳೆಗೆ ಹೋಟೆಲ್ ತಲುಪಿದೆವು. ಮೊದಲ ದಿನ ಅಲ್ಲಿಗೆ ಮುಗಿದಿತ್ತು.

ಎರಡನೆಯ ದಿನ ಕ್ಯಾಂಪಸ್ ತಲುಪಿದ್ದಂತೆ ಅದ್ದೂರಿ ಪಥಸಂಚಲನದ ಮೆರವಣಿಗೆ. ಧ್ವಜಾರೋಹಣ, ಭರ್ಜರಿ ಬ್ರೇಕ್–ಫಾಸ್ಟ್ ಬಳಿಕ ಗೀತಾಶ್ರೀ ಮೇಡಂ, ಮಂಜುನಾಥ ಉಪಾಧ್ಯ ಸರ್, ಗಣೇಶ ಸರ್ ಮತ್ತು ಪಾಂಡುರಂಗ ಸರ್ ಜತೆ ಫೋಟೋ ತೆಗೆಸಿಕೊಂಡು ಒಟ್ಟಾಗಿ ಮುಖ್ಯ ಸಭಾಂಗಣಕ್ಕೆ ಬಂದೆವು.

ಅಲ್ಲಿ ಭಾಷಣಕಾರರ ಅತ್ಯುತ್ತಮ ಮಾತುಗಾರಿಕೆ. ಮೊದಲಿಗೆ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ. ಅರ್ಡಿನರಿಯಾಗಿ ಬದುಕಿದವ ಅರ್ಡಿನರಿಯಾಗಿಯೇ ಸಾಯುತ್ತಾನೆ, ಎಸ್ಟ್ರಾರ್ಡಿನರಿಯಾಗಿ ಬದುಕಿದಾಗ ಎಸ್ಟ್ರಾರ್ಡಿನರಿಯಾಗಿಯೇ ಸಾಯುತ್ತಾನೆ. ಯಾರು ಸೋಲಿನ ಭಯ, ಟೀಕೆ – ವಿಮರ್ಶೆ – ದೂಷಣೆಗಳ ಭಯಗಳಿಂದ ಮುಕ್ತನಾಗಿ ಮುನ್ನುಗ್ಗುವನೋ ಆತ ಯಶಸ್ವಿಯಾಗುತ್ತಾನೆ. ವಿಜ್ಞಾನ ಮತ್ತು ಅಧ್ಯಾತ್ಮ ಒಂದಕ್ಕೊಂದು ಪೂರಕವೇ ಹೊರತು ಮಾರಕವಲ್ಲ. ಸಾಕ್ಷರತೆಗೂ ಶಿಕ್ಷಣಕ್ಕೂ ವ್ಯತ್ಯಾಸವಿದೆ. ಬುದ್ಧಿವಂತಿಕೆ ಮತ್ತು ಮಾನವೀಯತೆ ಎರಡೂ ಮನುಷ್ಯನಲ್ಲಿರಬೇಕು. ಬಡವನ ಒಂದು ತೊಟ್ಟು ಕಣ್ಣೀರು ಒರೆಸಿದಲ್ಲಿ ಅದು ಆತನಲ್ಲಿ ಹತ್ತು ತೊಟ್ಟು ಆತ್ಮವಿಶ್ವಾಸ ರಕ್ತ ಉತ್ಪತ್ತಿ ಮಾಡುತ್ತದೆ. ಎಂದು ತಮ್ಮ ಆಶೀರ್ವಚನದಲ್ಲಿ ಹೇಳಿ ಈ ದೃಷ್ಟಿಕೋನದಲ್ಲಿ ಸೇವೆಗೈಯುವ ರೋಟರಿ ಸಂಸ್ಥೆಗೆ ಶುಭ ಹಾರೈಸಿದರು.

ಬಳಿಕ ಮಾತನಾಡಿದವರು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ISRO) ಮಾಜಿ ಅಧ್ಯಕ್ಷರು (2022–2025) ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯಾಗಿದ್ದ ಪ್ರಮುಖ ಬಾಹ್ಯಾಕಾಶ ವಿಜ್ಞಾನಿ ಡಾ. ಎಸ್. ಸೋಮನಾಥ್. ಇವರ ನೇತೃತ್ವದಲ್ಲಿ ಚಂದ್ರಯಾನ–3 ಮಿಷನ್‌ನ ಐತಿಹಾಸಿಕ ಯಶಸ್ಸು ಸಾಧಿಸಲಾಯಿತು. ಇವರು ಉಡಾವಣಾ ವಾಹನ ವಿನ್ಯಾಸ, ರಚನಾತ್ಮಕ ವಿನ್ಯಾಸ ಮತ್ತು ಡೈನಾಮಿಕ್ಸ್‌ನಲ್ಲಿ ಪರಿಣಿತರಾಗಿದ್ದಾರೆ. ಇವರು 2047ಕ್ಕೆ ಇಟ್ಟುಕೊಂಡಿರುವ ಗುರಿ, ದೇಸೀ ಬಾಹ್ಯಾಕಾಶ ಯೋಜನೆಗಳಿಂದಾಗು ಆರ್ಥಿಕ ಲಾಭಗಳು, ಇಸ್ರೋ ನೀಡುರುತ್ತಿರುವ ತುರ್ತು ಸೇವೆಗಳಿಂದ ಆಗಿರುವ 3000ಕ್ಕೂ ಅಧಿಕ ಜೀವ ರಕ್ಷಣೆ ಬಗೆಗೆ ಹೇಳಿ, Life grows richer when the mind learns to listen, instead of talking ಎನ್ನುವ ಮೌಲ್ಯಯುತ ಸಂದೇಶವನ್ನು ನೀಡಿದರು.

ಮುಂದಿನ ಸಂಚಿಕೆಗೆ

ಬೌದ್ಧಿಕ ಸಿರಿ ಪರಿಸ್ಥಿತಿಯೋ, ಮನಸ್ಥಿತಿಯೋ!

ಅದೊಂದು ಬ್ಯುಸಿ ರೆಸ್ಟೋರೆಂಟ್. ಜನರು ತಮ್ಮ ತಮ್ಮ ಮಾತುಗಳಲ್ಲಿ, ಊಟದ ಸವಿಯಲ್ಲಿ ತೊಡಗಿದ್ದರು. ಅಲ್ಲೆಲ್ಲಾ ನಗು, ಮಾತು, ಸಂತೋಷದ ಕ್ಷಣಗಳು.

ಅಷ್ಟರಲ್ಲಿ ಹಠಾತ್ ಯಾರೂ ಊಹಿಸದ ಕ್ಷಣ...

ಒಂದು ಜಿರಳೆ ಹಾರಿ ಬಂದು ಒಬ್ಬ ಮಹಿಳೆಯ ಭುಜದ ಮೇಲೆ ಬಿದ್ದಿತು. ಆ ಕ್ಷಣವೇ ಅವಳ ಮನಸ್ಸು ನಿಯಂತ್ರಣ ತಪ್ಪಿತು. ಅವಳು ಭಯದಿಂದ ಕೂಗಿದಳು. ತೂರಾಡಿ, ಕೈ ಬೀಸಿ ಜಿರಳೆಯನ್ನು ತಳ್ಳಿದಳು.

ಆ ತಳ್ಳುವಿಕೆಯಿಂದ ಜಿರಳೆ ಹಾರಿ ಹೋಗಿ, ಪಕ್ಕದಲ್ಲಿ ಕುಳಿತಿದ್ದ ಮತ್ತೊಬ್ಬ ಮಹಿಳೆಯ ಮೇಲೆ ಬಿದ್ದಿತು. ಈಗ ಅವಳಿಗೂ ಭಯ ... ಗಾಬರಿ ಬಿದ್ದು ಕೂಗಾಟ.

ಶಾಂತವಾಗಿದ್ದ ರೆಸ್ಟೋರೆಂಟ್ ಕೆಲವೇ ಕ್ಷಣಗಳಲ್ಲಿ, ಒಂದು ಗದ್ದಲದ ಸ್ಥಳವಾಯಿತು. ಎಲ್ಲವೂ ಅಸ್ಥವ್ಯಸ್ಥಗೊಂಡವು.

ಜಿರಳೆ ಒಂದೇ ಒಂದು. ಗೊಂದಲ ಅನೇಕರಲ್ಲಿ.... ಎಲ್ಲರೂ ಜಿರಳೆಯನ್ನು ತಪ್ಪಿಸಲು ಓಡಾಡುತ್ತಿದ್ದಾಗ, ಅಲ್ಲಿದ್ದ ಒಬ್ಬ ಸಪ್ಲಾಯರ್ ಶಾಂತವಾಗಿ ನಿಧಾನವಾಗಿ ಮುಂದೆ ಬಂದು, ಜಿರಳೆಯನ್ನು ಹಿಡಿದು, ಹೊರಗೆ ಬಿಟ್ಟ. ಕ್ಷಣದಲ್ಲೇ ಎಲ್ಲವೂ ಶಾಂತ.

ಈ ದೃಶ್ಯವನ್ನು ನೋಡಿ ಸುಂದರ್ ಪಿಚ್ಚೈ ಕೇಳುವ ಪ್ರಶ್ನೆ: "ಈ ಗದ್ದಲಕ್ಕೆ ಕಾರಣ ಜಿರಳೆನಾ?"

ಉತ್ತರ ಸ್ಪಷ್ಟ: ಜಿರಲೆಯೊಂದೇ ಕಾರಣವಲ್ಲ!

ಜಿರಳೆ ಒಂದು ಸಮಸ್ಯೆ. ಆದರೆ ಸಮಸ್ಯೆ ದೊಡ್ಡದಾದದ್ದು ಜನರ ಪ್ರತಿಕ್ರಿಯೆಯಿಂದ. ಅದೇ ಜಿರಳೆ, ಎಲ್ಲರ ಮೇಲೂ ಬಿದ್ದಿತು, ಆದರೆ, ಮಹಿಳೆಯರು ಭಯದಿಂದ ಪ್ರತಿಕ್ರಿಯೆ ನೀಡಿದರು, ಸಪ್ಲಾಯರ್ ಶಾಂತವಾಗಿ ಪ್ರತಿಸ್ಪಂದನೆ ನೀಡಿದ.

ಜೀವನದಲ್ಲಿಯೂ, ಕ್ಲಿಷ್ಟಕರ ಪರಿಸ್ಥಿತಿ ಜಿರಳೆ ಬಂದಂತೆ ಎಲ್ಲಿಂದಲೋ ಹಠಾತ್ ಬರಬಹುದು. ಆದರೆ ನಮ್ಮ ಜೀವನವನ್ನು ಕೆಡಿಸುವುದು ಪರಿಸ್ಥಿತಿಯಲ್ಲ, ಮನಸ್ಥಿತಿ.

ಮನಸ್ಥಿತಿಗೆ ನಾವು ಸ್ಪಂದಿಸುವ ರೀತಿ.

ಪ್ರತಿಕ್ರಿಯೆ ನಮ್ಮ ಶಕ್ತಿಯನ್ನು ಕಸಿದುಕೊಳ್ಳುತ್ತದೆ.

ಪ್ರತಿಸ್ಪಂದನೆ ನಮ್ಮ ವ್ಯಕ್ತಿತ್ವವನ್ನು ಕಟ್ಟುತ್ತದೆ.

ಪ್ರತಿಸ್ಪಂದನೆ ಮೆಂಟಲೀ ಸ್ಟ್ರಾಂಗ್ ಮಾಡಿದರೆ,

ಪ್ರತಿಕ್ರಿಯೆ ಸ್ಟ್ರಾಂಗ್ಲೀ ಮೆಂಟಲ್ ಮಾಡಬಹುದು!

ಸಂಕಲನ : ರೊ. ರಾಜೇಶ್ ಡಿ. ಶೆಣೈ

ಜನವರಿ 20ರ ಸಭೆಯ ಛಾಯಾಚಿತ್ರಗಳು

ರೊ. ಅಲೆನ್ ವಿನಯ್ ಲೂಯಿಸ್ ಅವರು 2028–29ನೇ ಸಾಲಿನ ರೋಟರಿ ಜಿಲ್ಲಾ ರಾಜ್ಯಪಾಲ (DGND – District Governor Nominee Designate) ರಾಗಿ ಚುನಾಯಿತರಾಗಿದ್ದಾರೆ. PDG ಬಿ. ಎನ್. ರಮೇಶ್ ಅವರು ಸ್ಪಂದನ 2026 ರೋಟರಿ ಜಿಲ್ಲಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಈ ಆಯ್ಕೆಯನ್ನು ಘೋಷಿದರು. ಬಳಿಕ ರೊ. ಅಲೆನ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. (DGE: 2026–27ನೇ ಸಾಲಿಗೆ ರೊ. ಬಿ. ಎಮ್. ಭಟ್ ಹಾಗೂ DGN: 2027–28 ನೇ ಸಾಲಿಗೆ ರೊ. ವಸಂತ್ ಹೋಬ್ಳಿದಾರ್).

ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 27ನೇ ವಾರದ ಸಭೆ 20/1/2026 ರಂದು RCC ಕಾರ್ಯಾಲಯದಲ್ಲಿ ಜರುಗಿತು.

ರೋಟರಿ ಐಸಿರಿಯ ನಿಕಟ ಪೂರ್ವಾಧ್ಯಕ್ಷರಾದ ರೊ. ಸುನಿಲ್ ಕುಮಾರ್ ಅವರು ಅಧ್ಯಕ್ಷತೆ ವಹಿಸಿದರು.

ರೊ. ಸಂದೀಪ್ ಕುಮಾರ್ ಅವರು ಪ್ರಾರ್ಥನೆ ನಡೆಸಿದರು.

ರೊ ಸುನಿಲ್ ಕುಮಾರ್ ಸಭೆಯನ್ನು ಸ್ವಾಗತಿಸಿದರು.

ಕಾರ್ಯದರ್ಶಿ ರೊ ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ರೋಟರಿ ಐಸಿರಿಯ ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಮಂಜುನಾಥ್ ಉಪಾಧ್ಯ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸಹಕರಿಸಿದರು.

ರೊ. ಮಂಜುನಾಥ್ ಉಪಾಧ್ಯ ಅವರು ಮಾತನಾಡಿ ನಿರಂತರವಾಗಿ ಐಶ್ವರ್ಯ ಬುಲೆಟಿನ್ ಅನ್ನು ಅರ್ಥಪೂರ್ಣವಾಗಿ ರಚಿಸುತ್ತಿರುವ ರೊ. ರಾಜೇಶ್ ಶೆಣೈ ಅವರನ್ನು ಪ್ರಶಂಸಿಸಿದರು.

ರೊ. ಸ್ಮಿತಾ ಕಾಮತ್ ಅವರು ತನ್ನ ಶಿಕ್ಷಕವೃತ್ತಿ ಜೀವನದ ಅನುಭವವನ್ನು ಹಂಚಿಕೊಂಡರು. ಅಂತೆಯೇ ಯುವಜನ ಸೇವೆಯಲ್ಲಿ ರೋಟರಿಗೆ ಇರುವ ಅವಕಾಶಗಳನ್ನು ತಿಳಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು 27 ಜನವರಿಯಂದು ನಡೆಯಲಿರುವ ಹೊರಾಂಗಣ ಸಭೆಯ ಪೂರ್ವತಯರಿ ಬಗ್ಗೆ ತಿಳಿಸಿದರು.

ರೊ. ಪ್ರಭಾಕರ್ ಶೆಟ್ಟಿ ಅವರು ವೃತ್ತಿಪರ ಮಾಸಾಚರಣೆಯನ್ನು ಹೊರಾಂಗಣ ಸಭೆಯಲ್ಲಿ ಆಚರಿಸುವ ಬಗ್ಗೆ ಮಾತನಾಡಿದರು.

RCC ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಲು RCC ಐಸಿರಿ ನಡೆಸುತ್ತಿರುವ ತಯಾರಿ ಬಗ್ಗೆ ಮಾಹಿತಿ ನೀಡಿದರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು classification talk ಬಗ್ಗೆ ಮಾಹಿತಿ ನೀಡಿದರು.

ರೊ. ಸುನಿಲ್ ಕುಮಾರ್ ಅಧ್ಯಕ್ಷೀಯ ಭಾಷಣದಲ್ಲಿ 27 ಜನವರಿಯಂದು ನಡೆಯಲಿರುವ ಹೊರಾಂಗಣ ಸಭೆಗೆ ಎಲ್ಲರನ್ನೂ ಕುಟುಂಬ ಸಮೇತರಾಗಿ ಬರಲು ಆಹ್ವಾನಿಸಿದರು.

ರೊ. ಕೊರಗಪ್ಪ ಶೆಟ್ಟಿಗಾರ್ ಅದೃಷ್ಟಶಾಲಿ ವ್ಯಕ್ತಿಯ ಆಯ್ಕೆ ನಡೆಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.

ಕಾರ್ಯದರ್ಶಿ ಧನ್ಯವಾದ ಸಮರ್ಪಿಸಿದರು. ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

"ಐಶ್ವರ್ಯ" 29ನೇ ಸಂಚಿಕೆ ಬಿಡುಗಡೆ

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತೊಂಭತ್ತೆನೇ ಸಂಚಿಕೆಯನ್ನು ರೊ. MPHF. ಮಂಜುನಾಥ್ ಉಪಾಧ್ಯ 20/01/2026 ರಂದು ಬಿಡುಗಡೆಗೊಳಿಸಿದರು.

ರೋಟರಿ ಐಸಿರಿಯ 27ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ಕೊರಗಪ್ಪ ಶೆಟ್ಟಿಗಾರ್ ಅವರು ನಡೆಸಿ, ರೊ. PHF. ಗುರುಪ್ರಸಾದ್ ಕಾಮತ್ ಅದೃಷ್ಟಶಾಲಿಯಾಗಿ ಆಯ್ಕೆಯಾದರು.